International Journal of Kannada Research
www.kannadajournal.com

ISSN: 2454–5813
IJKR 2024; 10(2): 81-87
© 2024 IJKR
www.kannadajournal.com
Received: 01-01-2024
Accepted: 04-02-2024

**ಡಾ. ಪೂರ್ಣಿಮಾ ಎಸ್.**
ಮುಖ್ಯಸ್ಥರು, ಕನ್ನಡ ವಿಭಾಗ, ಶೇಷಾದ್ರಿಪುರಂ ಇನ್ಸ್‌ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್ ಕಾಲೇಜ್, ಶೇಷಾದ್ರಿಪುರಂ, ಬೆಂಗಳೂರು, ಕರ್ನಾಟಕ, ಭಾರತ

**Corresponding Author:**
**ಡಾ. ಪೂರ್ಣಿಮಾ ಎಸ್.**
ಮುಖ್ಯಸ್ಥರು, ಕನ್ನಡ ವಿಭಾಗ, ಶೇಷಾದ್ರಿಪುರಂ ಇನ್ಸ್‌ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್ ಕಾಲೇಜ್, ಶೇಷಾದ್ರಿಪುರಂ, ಬೆಂಗಳೂರು, ಕರ್ನಾಟಕ, ಭಾರತ

# ಮಧ್ಯಕಾಲೀನ ಭಾರತದಲ್ಲಿ ಸಂತ ಮಹಿಳೆಯರ ವ್ಯಕ್ತಿತ್ವ ಮತ್ತು ಸಾಹಿತ್ಯ ದರ್ಶನ ಕೃತಿಯ ವಿಶ್ಲೇಷಣೆ

**ಡಾ. ಪೂರ್ಣಿಮಾ ಎಸ್.**

**ಪೀಠಿಕೆ**

ಮಮಕಾರಗಳಿಂದ ಮುಕ್ತರಾಗಿ ರಾಗ-ದ್ವೇಷಗಳಿಂದ ದೂರಾಗಿ ಸಾಮಾಜಿಕ, ಸಾರ್ವತ್ರಿಕ ಒಳಿತಿಗಾಗಿ ತಮ್ಮನ್ನ ಸಮರ್ಪಿಸಿಕೊಂಡ ಸ್ತ್ರೀ- ಪುರುಷರೆಲ್ಲರೂ ಸಂತರೆ. ಮಧ್ಯಕಾಲೀನ ಭಾರತದಲ್ಲಿ ಸಂತ ಮಹಿಳೆಯರ ವ್ಯಕ್ತಿತ್ವ ಮತ್ತು ಸಾಹಿತ್ಯ ದರ್ಶನ ಎಂಬ ಈ ಕೃತಿಯು ಉತ್ತರ ಭಾರತ ಮೂಲದ ಅನಾಮಿಕ ಹದಿಮೂರು ಮಂದಿ ಸಂತ ಮಹಿಳಾ ಶಿರೋಮಣಿಗಳ ಆಧ್ಯಾತ್ಮಿಕ ಜೀವನ ಬದುಕು ಬರಹ, ವೈರಾಗ್ಯಗಳನ್ನು, ಪರಿಚಯಿಸುವ ವಿವರಣಾತ್ಮಕ ಸಂಶೋಧನಾ ಕೃತಿಯಾಗಿದೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಲೌಕಿಕ ಆಸೆ, ಆಕಾಂಕ್ಷೆ, ಅರಿಷಡ್ವರ್ಗಗಳ ಬಂಧನಕ್ಕೆ ಸಿಲುಕದೆ; ತ್ಯಾಗ, ಯೋಗ, ಧ್ಯಾನ ಇತ್ಯಾದಿಗಳ ಮುಖೇನ ಆಧ್ಯಾತ್ಮಿಕತೆಯ ಕಡೆ ಹೊರಳಿದವರ ಒಲವು-ನಿಲುವುಗಳು, ಅವರು ಪರಾತ್ಪರ ಚಿಂತನೆಗಳನ್ನು ತಮ್ಮಲ್ಲಿ ಆವಾಯಿಸಿಕೊಂಡಿರುವ ಲಲ್ಲೇಶ್ವರಿ, ಮುಕ್ತಾಬಾಯಿ, ಪುಲಿಬಾಯಿ, ಓಂಕಾರೇಶ್ವರಿ, ಅಂಬಾಬಾಯಿ, ಸುಖೀದೇವಿ ಮುಂತಾದವರ ಜೀವನ ದರ್ಶನ ಹಾಗೂ ಮೌಲ್ಯಗಳನ್ನು ಹಿಂದಿ ಭಾಷೆಯಿಂದ ಕನ್ನಡ ಸಾರಸ್ವತ ಲೋಕಕ್ಕೆ ಪರಿಚಯಿಸುವ ಪ್ರಾಮಾಣಿಕ ಪ್ರಯತ್ನವನ್ನು ಕುಣಿಗಲ್ ಬಾಪೂಜಿ ಸರ್ಕಾರಿ ಪ್ರೌಢಶಾಲೆಯ ಹಿಂದೆ ಭಾಷಾ ಅಧ್ಯಾಪಕಿಯಾದ ಸೌಮ್ಯ ಅವರು ಸಂಶೋಧನೆ ಮಾಡಿ ಪಿಹೆಚ್.ಡಿ ಪಡೆದು ಪ್ರಕಟಪಡಿಸಿದ್ದಾರೆ. ಡಾ.ಚಿ.ದೇ.ಸೌಮ್ಯ ಅವರ ಈ ಪ್ರಕಟಿತ ಸಂಶೋಧನಾ ಕೃತಿಯನ್ನು ಕನ್ನಡ ಸಾಹಿತ್ಯ ಕ್ಷೇತ್ರದ ಸಹೃದಯರ ಅವಗಾಹನೆ ತರುವ ಅಪೇಕ್ಷೆಯಿಂದ ಕೆಲವೊಂದು ಮಾಹಿತಿಗಳನ್ನು ತಿಳಿಸಬಯಸುತ್ತೇನೆ.

## 1. ಲಲ್ಲೇಶ್ವರಿ

14ನೇ ಶತಮಾನದ ಕಾಶ್ಮೀರದವರು. ಸರ್ವ ಸಮಾನ ದೃಷ್ಟಿ ಏಕೈಕ ಸರ್ವಜ್ಞನ ಅರಿವು ಸರ್ವೋದಯ ಚಿಂತನೆಗಳಿಂದಾಗಿ ಹಿಂದು ಮುಸ್ಲಿಂರಾದಿಯಾದ ಗೌರವಾದರಗಳನ್ನು ಪಡೆದಿದ್ದಳು. ಪಂಡ್ರೆನ್ತಾನ್ ಪಟ್ಟಣದ ಪಂಡಿತನ ಮನೆಯಲ್ಲಿ ಜನಿಸಿದರು. ಅತ್ತೆಮನೆ ಕಿರುಕುಳದಿಂದ ವೈರಾಗ್ಯ ತಾಳಿದ ಲಲ್ಲೇಶ್ವರಿ ಅವರು ಚಿಕ್ಕಂದಿನಿಂದಲೇ ಧಾರ್ಮಿಕ

ಮನೋಭಾವದವರಾಗಿದ್ದರು ಸಾಧುಸಂತರ ನಿಕಟ ಸತ್ಸಂಗದಲ್ಲಿದ್ದು ಅಪರಾ ಬೌದ್ಧಿಕತೆ ಹೊಂದಿದ್ದ ಲಲ್ಲೇಶ್ವರಿಯವರು ಯೋಗ, ಧ್ಯಾನ, ಆತ್ಮಗಳ ಬಗೆಗೆ ಸುಮಾರು ಇನ್ನೂರಕ್ಕೂ ಅಧಿಕ ಹಾಡುಗಳ ಇವರ ಬರಹದ ವೈಶಿಷ್ಟ್ಯತೆ ಶ್ರೀಮಾನ್ಯರಿಗೆ ಅರ್ಥವಾಗುವಂತೆ ಕಾಶ್ಮೀರಿ ಭಾಷೆಯಲ್ಲಿ ಶಿವನ ಮಹಿಮೆಗಳನ್ನು ಕುರಿತು ಸರಳವಾಗಿ ರಚಿಸಿರುವುದು ಇಂದಿಗೂ ಕಾಶ್ಮೀರದವರ ಜನಸಾಮಾನ್ಯರ ಬಾಯಲ್ಲಿ ನಲಿದಾಡುತ್ತಿವೆ. ಆಧ್ಯಾತ್ಮಿಕತೆಯ ಒಲವುಳ್ಳ ಲಲ್ಲೇಶ್ವರಿ ಅವರು ಜಾತಿ, ಮತ, ಪಂಥ, ವರ್ಗ ಮುಂತಾದ ಎಲ್ಲ ಮಿತಿಗಳನ್ನು ಮೀರಿ ನಮ್ಮೊಳಗಿನ ಸತ್ವದ ಬೆಳಕನ್ನು ಕಾಣಬೇಕೆಂಬ ಹಂಬಲವುಳ್ಳವರಾಗಿದ್ದರು.

ಮೀರಾಬಾಯಿಯಂತೆ ಲೋಕಲಜ್ಜೆಯ ಅರಿವಿರದ ಲಲ್ಲೇಶ್ವರಿಯವರು ಹಾದಿ-ಬೀದಿಗಳಲ್ಲಿ ಭಜನೆ ಕುಣಿತಗಳನ್ನು ಮಾಡುತ್ತಿದ್ದರಿಂದ ಲೋಕದ ಅಪಹಾಸ್ಯಕ್ಕೆ ಗುರಿಯಾಗಿದ್ದರು. ಶೈವಸಂತ ಸಿದ್ ಬಾಯು ಇವರ ಗುರುಗಳಾಗಿದ್ದರು. ಪಂಡಿತ ಆನಂದ್ ಕೌಲ್ 'ಲಲ್ಲಾ ಯೋಗೇಶ್ವರ್ ಹರ್ ಲೈಫ್ ಅಂಡ್ ಸೇಯಿಂಗ್ಸ್', ಆರ್.ಸಿ. ಟೆಂಪಲ್ 'ದ ವರ್ಡ್ಸ್ ಆಫ್ ಲಲ್ಲ ದಿ ಪ್ರೊಫಟೆಸ್' ಮೊದಲಾದವರು ಸೇರಿದಂತೆ ಮತ್ತು ಕನ್ನಡದಲ್ಲಿ ಜೆ ರುದ್ರಪ್ಪ 'ಲಲ್ಲ ಯೋಗೀಶ್ವರಿ' ಎಂಬ ಪುಸ್ತಕಗಳು ಇವರ ಬಗ್ಗೆ ಪ್ರಕಟವಾಗಿವೆ.

ಒಮ್ಮೆ ಬಟ್ಟೆ ವ್ಯಾಪಾರಿಯೊಬ್ಬರು ಕೊಟ್ಟ ಬಟ್ಟೆಯನ್ನು ಎರಡು ಮಾಡಿ ಹೆಗಲಿಗಾಕಿಕೊಂಡು ಜನ ಸ್ವಾಗತಿಸಿದಾಗ ಅಥವಾ ತಿರಸ್ಕರಿಸಿದಾಗ ಆ ಎರಡು ತುಂಡು ಬಟ್ಟೆಗಳಿಗೆ ಗಂಟಾಕಿ ತರುತ್ತಿದ್ದಳು. ಕೊನೆಗೆ ವ್ಯಾಪಾರಿ ಅವನ್ನು ತೂಕ ಮಾಡಿದಾಗ ಗಂಟಾಕಿರುವ ಆ ಎರಡೂ ಬಟ್ಟೆಗಳ ತೂಕ ಒಂದೆ ಸಮಾನವಾಗಿರುತ್ತಿತ್ತು. ಅಂದರೆ ಕನ್ನಡದ ಮೊಟ್ಟ ಮೊದಲ ಕವಯತ್ರಿ ಅಕ್ಕಮಹಾದೇವಿಯವರು ತಮ್ಮ ಒಂದು ವಚನದಲ್ಲಿ ಈ ಲೋಕದಲ್ಲಿ ಹುಟ್ಟಿದ ಬಳಿಕ ಸ್ತುತಿ ನಿಂದನೆಗಳಿಗೆ ಅಂಜದೆ ಸಮಾಧಾನವಾಗಿರಬೇಕು ಎಂಬುದಕ್ಕನುಗುಣವಾಗಿ ಲಲ್ಲೇಶ್ವರಿ ಅವರು ಜನರು ತಮಗೆ ತೋರಿದ ಸ್ವಾಗತ ಮತ್ತು ತಿರಸ್ಕಾರಗಳನ್ನ ಸಮಾಧಾನದಿಂದ ಸ್ವೀಕರಿಸಿ ಸಮಚಿತ್ತವನ್ನು ಸಾಧಿಸಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಅಲ್ಲದೆ ಸ್ವತಃ ಲಲ್ಲೇಶ್ವರಿಯವರೇ ತಾನು ಒಳ-ಹೊರಗಿನಿಂದ ನೋಡಿಕೊಳ್ಳುವ ಮೂಲಕ ಆತ್ಮ ಸಾಕ್ಷಾತ್ಕಾರದ ಪಾಠವನ್ನು ಕಲಿತಿದ್ದೇನೆಂದು 'ವಾಖ್' ಎಂಬ ಕಾಶ್ಮೀರಿ ಭಾಷೆಯ ಪದ್ಯವೊಂದರಲ್ಲಿ ಹೇಳಿಕೊಂಡಿದ್ದಾಳೆ. ಹಾಗೆಯೇ ಅತಿಯಾದ ಇಂದ್ರಿಯಗಳನ್ನು ಗೆಲ್ಲುವುದರಿಂದ ಮಾತ್ರ 'ಜ್ಞಾನದ ಬಾಗಿಲು' ತೆರೆದುಕೊಳ್ಳುತ್ತದೆ. ಹೇಗೆ ಅತಿಯಾದ ಸಿಹಿ ಸೇವನೆಯಿಂದ ಮಧುಮೇಹ ಉಂಟಾಗುವಂತೆ ಇಂದ್ರಿಯಾಪ್ರೇಕ್ಷಗಳಿಂದ ದೊಡ್ಡ ಸಮಸ್ಯೆಗಳು ಉಂಟಾಗುತ್ತವೆ. ಹಾಗಾಗಿ ಇಂದ್ರಿಯ ನಿಗ್ರಹ ಅತ್ಯವಶ್ಯಕ ಎಂದಿದ್ದಾಳೆ ಲಲ್ಲೇಶ್ವರಿ.

## 2. ಮುಕ್ತಾಬಾಯಿ

ಮಹಾರಾಷ್ಟ್ರದ ಸುಪ್ರಸಿದ್ಧ ಸಂತ ಕವಯಿತ್ರಿ. ಮರಾಠಿ ಸಂತ ಕವಿ 'ಜ್ಞಾನೇಶ್ವರ' ಅವರ ಸಹೋದರಿ. ಈಕೆಯ ಕಾಲಮಾನದ ಬಗ್ಗೆ ಅನೇಕ ವಾದ-ವಿವಾದಗಳಿವೆ. ಈಕೆ ಬದುಕಿದಿದ್ದು ಕೇವಲ ಇಪ್ಪತ್ತು ವರ್ಷವಷ್ಟೇ. ಕ್ರಿ.ಶ. 1279ರಲ್ಲಿ ಅಪೆಗಾಂವ್ ಎಂಬಲ್ಲಿನ ರುಕ್ಮಿಣಿ ಮತ್ತು ವಿಠ್ಠಲ್ ಪಂತ್ ಎಂಬುವವರ ಮಗಳಾಗಿ ಜನನಿದರು. ಈಕೆಗೆ ಮೂರು ಜನ ಸಹೋದರರು. ಅವರಲ್ಲಿ ಮೊದಲನೆಯವರಾದ 'ಜ್ಞಾನದೇವ' ನಂತರ 'ಸೋಘಾನ ದೇವ' ಎಂಬುವವರು ಕೆಲ ವರ್ಷಗಳ ಅಂತರದಲ್ಲೇ ತೀರಿಕೊಂಡಾಗ ಮುಕ್ತಾಬಾಯಿಯವರು ತೀವ್ರ ನೋವಿಗೆ ಮತ್ತು ಖಿನ್ನತೆಗೆ ಒಳಗಾಗಿದ್ದರು. ಇದು ವಚನಕಾರ್ತಿ ಮುಕ್ತಾಯಕ್ಕ ತನ್ನ ಅಣ್ಣನಾದ ಅಜಗಣ್ಣ ತೀರಿಕೊಂಡಾಗ ಅಪಾರ ನೋವು-ನಿರಾಶೆಗೆ ಒಳಗಾಗಿದ್ದುದನ್ನು ನೆನಪಿಸುತ್ತದೆ ಹಾಗಾಗಿ ಮುಕ್ತಾಬಾಯಿ ಮತ್ತು ಮುಕ್ತಾಯಕ್ಕ ಇಬ್ಬರಲ್ಲೂ ಅನೇಕ ಸಾಮ್ಯತೆಗಳನ್ನು ಕಾಣಬಹುದು. ವಯಸ್ಸಿನಲ್ಲಿ ಅತ್ಯಂತ ಕಿರಿಯಳಾಗಿದ್ದರೂ ಮುಕ್ತಾಬಾಯಿಯ ಅಲೌಕಿಕ ಜ್ಞಾನ ದರ್ಶನದಿಂದ ಯೋಗಿ ಚಾಂಗ್ ದೇವ್ ಅವರಿಗೆ ತಮ್ಮ ಅಹಂಕಾರದ ಅರಿವಾಗಿ ಮುಕ್ತಾಬಾಯಿಯನ್ನು ತಮ್ಮ ಗುರುವೆಂದು ಪರಿಗಣಿಸಿದ್ದು ಮಹತ್ವದ ಸಂಗತಿ. ಅಲ್ಲದೆ ನಾಥ ಸಂಪ್ರದಾಯದಲ್ಲಿ ಸದ್ಗುರು ಸ್ಥಾನವನ್ನು ಅಲಂಕರಿಸಿದ ಮೊದಲ ಮಹಿಳೆ ಮುಕ್ತಾಬಾಯಿಯವರು. ಹಾಗೆಯೇ 'ಗುರುಮಾತೆ' ಎಂದು ಸಹ ಪ್ರಸಿದ್ಧರಾಗಿದ್ದರು. "ನನ್ನ ತಾಯಿ ತಂದೆ ನಿತ್ಯವೂ ಜ್ಞಾನದ ಪರಮೇಶ್ವರರು. ಇವರನ್ನು ಹಾಡಿಹೋಗಳಲು ಎಂದಿಗೂ ವಿಶ್ರಾಂತಿ ಸಲ್ಲದು." ಎಂಬ ಅಭಂಗದೊಂದಿಗೆ 'ಸಕಲಸಂತ ಗಾಥದಲ್ಲಿನ ನಲವತ್ತೆರಡು ಅಭಂಗಗಳು ಸೇರಿದಂತೆ ಅನೇಕ ಅಂಗಗಳನ್ನು ರಚಿಸಿದ್ದರು. ಸಂತ ಜ್ಞಾನೇಶ್ವರರೊಂದಿಗಿನ ಸಂಭಾಷಣೆಯಾದ 'ತತಿ ಉದಡ ಜ್ಞಾನೇಶ್ವರ್' ಈಕೆಯ ಮೇರು ಕೃತಿ. ಜನರ ಆಲೋಚನೆಗಳನ್ನು

ಅರಿಯುವವನೇ ಸಂತನೆಂದು ಅಭಂಗದಲ್ಲಿ ತಿಳಿಸಿದ್ದಾಳೆ. ಈಕೆ ಹಿಂದೂ ಧರ್ಮದ ವಾರಕರಿ ಸಂಪ್ರದಾಯದ ಸಂತಳಾಗಿದ್ದಳು.

**3. ಮಹದಾಯಿಸ**

ಮಹಾರಾಷ್ಟ್ರದ ಬೀಡ್ ಜಿಲ್ಲೆಯ ಗೋದಾವರಿ ನದಿಯ ದಡದಲ್ಲಿನ ಹಳ್ಳಿಯಲ್ಲಿ ಭಟ್ ಎಂಬ ಬ್ರಾಹ್ಮಣ ಕುಟುಂಬದ ವಾಟ್ನಾಯಕ್ ಮತ್ತು ಕಾಮೈಸಾ ದಂಪತಿಗಳಿಗೆ ಜನಿಸಿದರು. ಮಹದಾಯಿಸಗೆ ಎಂಟು ಜನ ಸೋದರಿಯರೊಂದಿಗೆ 'ಆಪ್ದೇವ್'/ಅಪಾಲೋ ಎಂಬ ಸಹೋದರನಿದ್ದನು.

ಮಹದಾಯಿಸರ ಬಾಲ್ಯದ ಹೆಸರು ರಪೈಸಾ/ರೂಪ. ಬಾಲ್ಯ ವಿವಾಹಕ್ಕೆ ಬಲಿಪಶುವಾಗಿ ವಿಧವೆಯಾಗಿದ್ದಳು. ತನ್ನ ಸೋದರ ಸಂಬಂಧಿ ನಾಗದೇವ್ ನನ್ನು ವ್ಯಸನಗಳಿಂದ ಮುಕ್ತನನ್ನಾಗಿ ಮಾಡಿದಳು. ತತ್ಪರಿಣಾಮವಾಗಿ ಆತ ಮುಂದೆ 'ಮಹಾನುಭಾವ ಪಂಥ'ದ ಮೊದಲ ಆಚಾರ್ಯರಾದರು. ಜಾತಿ-ವರ್ಗ, ವರ್ಣ-ಲಿಂಗ ರಹಿತ ಧಾರ್ಮಿಕ ಆಂದೋಲನ ಆರಂಭಿಸಿದ್ದ ಶ್ರೀ ಚಕ್ರಧರ ಸ್ವಾಮಿಯವರನ್ನು 'ಕಿರ್' ಎಂಬ ಸ್ಥಳದಲ್ಲಿ ಸಂದರ್ಶನ ಸಭೆ ನಡೆಸಿದ ಮಹಾದಾಯಿಸ ಶ್ರೀಚಕ್ರಧರ ಸ್ವಾಮಿಗಳ ಪ್ರಭಾವಕ್ಕೆ ಒಳಗಾಗಿ ಅವರನ್ನು ಗುರುವಾಗಿ ಸ್ವೀಕರಿಸಿದಳು. ಆಗ ಶ್ರೀಚಕ್ರಧರ ಸ್ವಾಮಿಗಳು ರೂಪೈಸಾಗೆ ಬದಲು ಮಹದಾಯಿಸ ಎಂದು ಹೆಸರಿಟ್ಟರು. ನಂತರ ಶ್ರೀ ಚಕ್ರಧರ ಸ್ವಾಮಿಗಳ ಆದೇಶದಂತೆ ಶ್ರೀ ಗೋವಿಂದ ಪ್ರಭುರವರ ಮಾರ್ಗದರ್ಶನದಲ್ಲಿ ಉಳಿದುಕೊಂಡರು. ಅನಂತರ ಆಚಾರ್ಯ ನಾಗದೇವ್ ಮತ್ತು ಇತರ ಶಿಷ್ಯರೊಂದಿಗೆ ಸೇರಿಕೊಂಡು 'ಮಹಾನುಭವ ಪಂಥ'ಕ್ಕೆ ಅಡಿಪಾಯವನ್ನು ಹಾಕಿದರು.

**4. ಬಾವರಿಸಾಹಿಬಾ**

ಇವರ ವ್ಯಕ್ತಿತ್ವವು 'ಬಾವ್ರಿ' ಪಂಥಕ್ಕೆ ಶಕ್ತಿಯಾಗಿದೆ. ಇಕೆ ಸುಮಾರು ಕ್ರಿ.ಶ.1566-1661ರ ಕಾಲಮಾನದಲ್ಲಿ ಬಾಳಿ ಬದುಕಿದ ಬಾವ್ರಿಸಾಹಿಬಾ ಅವರು ಚಕ್ರವರ್ತಿ ಅಕ್ಬರನ ಸಮಕಾಲೀನಳಾಗಿದ್ದಳು. ಹಿಂದಿ ಕವಿಗಳಾದ ಮೀರಾಬಾಯಿ, ಮಲಕ್ ದಾಸ್, ಸಂತ ಮಧುರ ದಾಸ್, ಸಂತ ದಾದ ದಯಾಳ್, ಸಂತ ಸುಂದರ ದಾಸ್, ಸಂತ ತುಳಸಿದಾಸ್, ಆಶ್ಚರ್ಯ ಕೇಶವದಾಸ ಮುಂತಾದವರೆಲ್ಲರೂ ಬಾವ್ರಿಸಾಹಿಬಾ ಅವರ ನಿರ್ಮಲ ಜೀವನದ ಕಡೆಗೆ ಆಕರ್ಷಿತರಾಗಿ ಅಕೆಯ ಕುರಿತು ಕಾವ್ಯ ರಚಿಸಿದ್ದರು. ಈಕೆಯ ಕಾವ್ಯ ಭಾಷೆ 'ಖಡಿಬೋಲಿ'. 'ಬಾವ್ರಿ' ಎಂಬುದು ಉಪನಾಮವೆಂದು ಸವಯ್ಯದಿಂದ ಸ್ಪಷ್ಟವಾಗಿ ತಿಳಿಯಬಹುದು.

**5. ಪುಲಿಬಾಯಿ**

ಪುಲಿಬಾಯಿಯವರು ರಾಜಸ್ಥಾನದ ಮಾರವಾಡಿ ಸಂತ ಕವಯತ್ರಿಯರಲ್ಲಿ ಅತ್ಯಂತ ಸುಪ್ರಸಿದ್ದರು. ಜಾನ್ವರ್ ಗ್ರಾಮದ ಸರನ್ ಶಾಖೆಯ ಜಾಟ್ ಎಂಬುವರ ಮಗಳು. ಜೋಧಪುರದ ಮಹಾರಾಜ 'ಜಸ್ವಂತ್ ಸಿಂಗ್' ಆಳ್ವಿಕೆಯಲ್ಲಿ ಈಕೆಯ ಆಚರಣೆಗಳು ಪ್ರವರ್ಧಮಾನಕ್ಕೆ ಬಂದಿತು. ಇವರ ತಾಯಿಯ ಅಜ್ಜಿ ಮನೆ 'ಮಂಜ್ವಾಸ್' ನಲ್ಲಿ ಪುಲಿಬಾಯಿ ಬೆಳೆದಳು. "ಜಾನಿ ಆಯೇ ಗರ್ವೇ, ಪುಲಿ ಕಿಯೋ ವಿಚಾರ್" ಅಂದರೆ ಎಲ್ಲ ಮಕ್ಕಳನ್ನು ಪ್ರೀತಿಸಬೇಕಾದ್ದರಿಂದ ನನ್ನ ಸೇವಕರಾಗಿರಿ. ಈಕೆ ಯಾವುದೇ ಔಪಚಾರಿಕ ಶಿಕ್ಷಣ ಪಡೆಯದಿದ್ದರೂ ನಿರಾಕಾರ ಬ್ರಹ್ಮನ ಆರಾಧನೆಯಲ್ಲಿ ದ್ವಿಪದಿಗಳನ್ನ ರಚಿಸಿದಳು. ಚೌಪಾಸ್ನಿಯ ರಾಜಸ್ಥಾನಿ ಸಂಶೋಧನಾ ಸಂಸ್ಥೆಯಲ್ಲಿನ ಪುಸ್ತಕ ಸಂಖ್ಯೆ 4863 ಈ ಪುಸ್ತಕದಿಂದ ಅನೇಕ ವಿದ್ವತ್ಪೂರ್ಣ ದ್ವಿಪದಿಗಳನ್ನು ಪಡೆಯಲಾಗಿದೆ. ಪುಲಿಬಾಯಿಯವರು ಭಾವಪರಶತೆಯಿಂದ ರಾಮನಾಮವನ್ನು ಜಪಿಸುತ್ತಿದ್ದಳು "ಗ್ಯಾನಿ ಗುರ್ ಪುರ ಮಿಲ್ಯಾ. ತುರತ್ ಮಿಲಯಾ ಪೀವ್.

ಕ್ಯಾ ಗಂಗಾ ಕ್ಯಾ ಗೋಮತಿ,. ಬದರಿ ಗಯಾ ಪಿರಾಗ್". ಎಂದರೆ ಸತ್ಯಮಾರ್ಗವನ್ನು ತೋರಿಸುವವನೇ ಗುರು. ಗುರುವಿನ ಆಶೀರ್ವಾದದಿಂದ ಜ್ಞಾನ ಪಡೆದ ನಾವು ನಮಗೆ ಪ್ರಿಯವಾದ ದೇವರನ್ನು ಪಡೆಯಬಹುದು ಎನ್ನುತ್ತಿದ್ದಳು. ಈಕೆ ತನ್ನ ದ್ವಿಪದಿಗಳಲ್ಲಿ ಅನೈತಿಕ ಮಾರ್ಗಗಳನ್ನು ನಿಷ್ಠೊರವಾಗಿ ಖಂಡಿಸಿರುವ ನೀತಿ ಬೋಧಕ ವಿಷಯಗಳನ್ನು ಕಾಣಬಹುದು. ಸಾಮಾನ್ಯವಾಗಿ ರಾಜಾಡಳಿತಗಳ ಆಶ್ರಯದಲ್ಲಿದ್ದಾಗ ರಾಜರ ಮತ್ತು ಕುಟುಂಬದವರ ಓಲೈಕೆಗಳಲ್ಲಿಬೇಕಾಗುತ್ತದೆ ಆದರೆ ಪುಲಿಬಾಯಿ ಎಷ್ಟು ನಿರ್ಭೀತ ವ್ಯಕ್ತಿತ್ವದವಳೆಂದರೆ ತನ್ನ ದ್ವಿಪದಿಗಳಲ್ಲಿ ರಾಜಮನೆತನದ ಮಹಿಳೆಯರ ದುರ್ನಡತೆಗಳನ್ನು ವ್ಯಂಗ್ಯದಿಂದ ಖಂಡಿಸುವುದಲ್ಲದೆ ನಿಖರವಾದ ಉತ್ತರವನ್ನು ನೀಡುವಂತಿವೆ ಹಾಗೆಯೇ ಈಕೆ ತನ್ನ ಬರಹಗಳಲ್ಲಿ ಮಹಿಳೆಯರಿಗೆ ಸರಳ ಜೀವನ ಪಾಠ, ಸಮಾಜ ಸುಧಾರಣೆ ಹಾಗೂ ಪ್ರಜಾಸತ್ತಾತ್ಮಕ ಚಿಂತನೆಯ ದೃಷ್ಟಿ ಪರೋಕ್ಷವಾಗಿ ತಿಳಿಸಿದ್ದಾಳೆ. ಈಕೆಯ ರಚನೆಗಳು ನಿರ್ಗುಣ ಸಂತ ಕಾವ್ಯದ ಪ್ರಮುಖ ಕೊಂಡಿಗಳಾಗಿವೆ.

### 6. ದಯಾಬಾಯಿ 1750-1830

ಈಕೆ ಸಹಜೋಬಾಯಿ ಗುರುಗಳ ಸಹೋದರಿ. ಸಂತ ಚರಣದಾಸ್ ಗುರುಜಿ ಅವರ ಐವತ್ತೆರಡು ಶಿಷ್ಯರಲ್ಲಿ ಇವರು ಒಬ್ಬರು. ಗುರುಗಳ ಮಾರ್ಗದರ್ಶನದಿಂದ ಮಾನವರ ಲೌಕಿಕ ವಿಮೋಚನೆಗಾಗಿ ದಯಾಬೋಧ ಎಂಬ ಗ್ರಂಥವನ್ನು ರಚಿಸಿರುವುದು ಕಂಡುಬರುತ್ತದೆ. "ಚರಣದಾಸರ ಕೃಪೆಯಿಂದ ಮನದಲ್ಲಿ ಚೈತನ್ಯ ಮೂಡಿತು ದಾನಕ್ಕಾಗಿ ಅನುಕಂಪದ ಮಾರ್ಗವನ್ನು ಅನುಸರಿಸಿದರು". ದಯಾಬಾಯಿಯವರ ಎರಡನೇ ಕೃತಿ 'ವಿನಯ ಮಾಲಿಕಾ'. ಅಷ್ಟೇ ಅಲ್ಲದೆ ಸಹಜೋಬಾಯಿ ಅವರ ಒಡಗೂಡಿ "ಗುರು ಮಹಿಮಾ, ಸಮಿರನ್ ಕೋ ಆಂಗ್, ಪ್ರೇಮ್ ಕೋಂ ಆಂಗ್ - (ವಿಪ್ರಲಂಬ ಶೃಂಗಾರ ಬಳಸಲಾಗಿದೆ) ಎಂಬ ದ್ವಿಪದಿಗಳನ್ನು ರಚಿಸಿದ್ದಾರೆ.

"ಆಸಾ ಘಾಸಿ ತೋರ್ ಕರಿ ಆಪ್ ರಹೇ ಲುಕಾಯಿ.

ಸುಂದರ್ ಶ್ಯಾಮ್ ಸ್ವರೂಪ್ ತುಮ್ ಕಹಾ ರಹೇ ಘರ್ ಚಾಯ್". ಎಂಬ ಕವನದಲ್ಲಿ ಪ್ರಾಣಿಗಳ ಮತ್ತು ಪ್ರಾಕೃತಿಕ ಪ್ರೀತಿಯ ಬಣ್ಣನೆ ಆಕರ್ಷಕವಾಗಿದೆ. ಕನ್ನಡದಲ್ಲಿ ವಚನ, ಕೀರ್ತನೆಗಳಂತೆ ಇಲ್ಲಿ 'ಬಾನಿ' ಎಂಬುದೊಂದು ಛಂದೋ ಪ್ರಕಾರ. ದಯಾಬಾಯಿ ತಮ್ಮ 'ಸಾಧ್ ಕಾ ಆಂಗ್' ಎಂಬ ಬಾನಿಯಲ್ಲಿ ಸಾಧುವಿನ ಮಹಿಮೆಯನ್ನು ಹಾಡಿದ್ದಾರೆ. ಸತ್ಸಂಗದ ಶಕ್ತಿ ವರ್ಣನಾತೀತವಾದುದು. ದೇವರ ಅನನ್ಯಯವಾದ ಪ್ರೀತಿಯನ್ನು ಸಂತರ ಸಹವಾಸದಲ್ಲಿ ದೊರೆಯುತ್ತದಲ್ಲದೆ, ಲೌಕಿಕ ಅಸ್ತಿತ್ವದ ಭವ ಸಾಗರವನ್ನು ದಾಟಲು ಯಾವುದೇ ವಿಳಂಬವಾಗುವುದಿಲ್ಲ ಎಂದಿದ್ದಾರೆ. ಇವರ ಕಾವ್ಯಗಳಲ್ಲಿ ಹಿಂದಿ, ಪರ್ಶಿಯನ್, ಪಂಜಾಬಿ, ಸಂಸ್ಕೃತ, ಅರಬಿಕ್, ರಾಜಸ್ಥಾನಿ ಮುಂತಾದವುಗಳ ಶಬ್ದಕೋಶ ಮತ್ತು ಭಾಷಾ ವೈಶಿಷ್ಟ್ಯತೆಗಳನ್ನು ಕಾಣಬಹುದು. ಇವರು ರಾಜಸ್ಥಾನಿ ಸಂತ ಮಹಿಳೆಯರಲ್ಲಿ ಸುಪ್ರಸಿದ್ಧ ಕವಯಿತ್ರಿಯಾಗಿದ್ದಾರೆ.

### 7. ಸಹಜೋಬಾಯಿ 1769-1862

ಚರಣದಾಸರ ಐವತ್ತೆರಡು ಶಿಷ್ಯರಲ್ಲಿ ಮೊದಲಿಗರು ಮತ್ತು ಇವರ ಹಾಸ್ಯಮಯ ಶೈಲಿಯಲ್ಲಿ ನ ರಚನಾ ವೈಶಿಷ್ಟ್ಯತೆ ಎಂದರೆ ಮಹಿಳೆಯೆಂದು ಪ್ರಸಿದ್ಧರು. ಈಕೆಯ ಜನಜೀವನದ ಕುರಿತ ಹಲವು ಮಾಹಿತಿಗಳಲ್ಲಿ ಡಾ. ಸಾವಿತ್ರಿ ಸಿನ್ಹಾ ಅವರು ತಿಳಿಸಿರುವ ಪ್ರಕಾರ ದೆಹಲಿಯಲ್ಲಿ ಪ್ರಸಿದ್ಧರಾದ ಎರಡನೇ ಕುಲದ ಉದ್ಯಮಿಯ ಮಗಳು. ಸಹಜೋಬಾಯಿ ತನ್ನ ನಾಲ್ಕು ಸಹೋದರರಿಗೆ ಒಬ್ಬಳೇ ಅಕ್ಕಳಾಗಿದ್ದಳು. ಒಮ್ಮೆ ಸಂತ ಚರಣದಾಸ್ ಅವರು ವಧುವಿನ ವೇಷದಲ್ಲಿದ್ದ ಈಕೆಯನ್ನ ಕುರಿತು "ಸಹಜ ತನಿಕ್ ಸುಹಾಗ್ ಪರ್, ಕಾಹಾ ಗುದಾಯೇ ಸೀಸ್.

ಮರ್ನಾ ಹೈ ರಹನ ನಹಿ, ಜಾನಾ ಬಿಸ್ವೆ ಬೀಸ್" ಎಂದು ಹಾಡಿದುದನ್ನು ಕೇಳಿ; ಸಹಜವಾಗಿ ತನ್ನ ಮದುವೆಯ ಎಲ್ಲಾ ಅಲಂಕಾರಗಳನ್ನ ಕಿತ್ತೆಸೆದಳು. ಇದೇ ವೇಳೆಯಲ್ಲಿ ಪಟಾಕಿ ಸಿಡಿದುದರ ಪರಿಣಾಮ ವರ ಕೂಡ ಸಾವನ್ನಪ್ಪುತ್ತಾನೆ. ಪರಿಣಾಮವಾಗಿ ಈಕೆ ಲೌಕಿಕ ಜೀವನದಿಂದ ಬೇರ್ಪಟ್ಟು ಚರಣದಾಸ್ ಗುರುಜಿ ಶಿಷ್ಯತ್ವ ಪಡೆದರು. ಯಾವುದೇ ಔಪಚಾರಿಕ ಶಿಕ್ಷಣ ಕಲಿಯದಿದ್ದರೂ ಮೂವತ್ತೆರಡು ಕಾವ್ಯ ಕೃತಿಗಳನ್ನು ರಚಿಸಿದ ಹೆಗ್ಗಳಿಕೆ ಇವರದು. ಈಕೆಯ ಆಧ್ಯಾತ್ಮಿಕ ಸಾಧನೆಯಿಂದ ಪ್ರಭಾವಿತರಾದ ಮೊಘಲ್ ಚಕ್ರವರ್ತಿ ಅಲಿಗೋಹರ್ ಆ ಕಾಲದಲ್ಲೇ ಒಂದು ಸಾವಿರದ ನೂರು ಚಿನ್ನದ ನಾಣ್ಯಗಳನ್ನು ಮತ್ತು 'ನರೇಲಾ' ಸೇರಿದಂತೆ ಅನೇಕ ಗ್ರಾಮಗಳನ್ನು ಸಹಜೋಬಾಯಿಯವರಿಗೆ ಉಡುಗೊರೆಯಾಗಿ ನೀಡಿದ್ದರು. ಈಕೆ ಉತ್ತರ ಭಾರತದ ಹರಿಯಾಣದವಳಾದ ಕಾರಣ ಅಲ್ಲಿಯ ಭಾಷಾ ಕೌಶಲ್ಯ ಈಕೆಗೆ ಜನ್ಮ ಸಿದ್ಧವಾಗಿತ್ತು. ಹರಿಯಾಣಿ ಭಾಷೆಯಲ್ಲಿ 'ಸಹಜ ಪ್ರಕಾಶ್' ರಚಿಸಿದ್ದರಿಂದ ಈಕೆಯನ್ನು ಆ ಭಾಷೆಯಲ್ಲಿ 'ಭಾಷಾ ಶಾಸ್ತ್ರಜ್ಞೆ' ಎಂದು ಸಹ ಕರೆಯಬಹುದು. ಕವಿತೆಗಳಲ್ಲಿ "ಧ್ವನಿ ಮತ್ತು ಸೌಂದರ್ಯದೊಂದಿಗೆ ಪ್ರಾಸ ಸೇರಿದರೆ ಸಂಗೀತವಾಗುತ್ತದೆ". ಪದ್ಯವೆಂದರೆ 'ದೋಹ' ಎಂದು ಸಹಜೋಬಾಯಿ ತಿಳಿಸಿದ್ದಾರೆ. ಈಕೆಯ ಕಾವ್ಯದಲ್ಲಿ 'ಖಡಿಬೋಲಿ' ಮತ್ತು 'ಉರ್ದು' ಭಾಷೆಗಳ ಸಮ್ಮಿಶ್ರಣ ಅಧಿಕವಾಗಿದೆ. ಈಕೆ ತನ್ನ ರಚನಾಶೈಲಿಯಿಂದ ಭಾರತೀಯ ಸಾಹಿತ್ಯದ ನಿರ್ಮಾತೃಗಳಲ್ಲಿ ಅಜರಾಮರಳಾಗಿದ್ದಾಳೆ.

### 8. ಗವರೀಬಾಯಿ 1815-1865

ದಕ್ಷಿಣ ರಾಜಸ್ಥಾನದ ಗಿರಿಪುರದಲ್ಲಿ ಬ್ರಾಹ್ಮಣ ನಾಗರ ಕುಟುಂಬದಲ್ಲಿ ಜನಿಸಿದರು. ಇವರು ಸಹ ಬಾಲ್ಯ ವಿವಾಹಕ್ಕೆ ಬಲಿಪಶುವಾಗಿ ಬಾಲ್ಯದಲ್ಲಿಯೇ ವಿಧವೆಯಾಗಿದ್ದರು. ಆದರೂ ಅದನ್ನು ನಿರಾಕರಿಸಿದ ಇವರು 'ದೇವರೇ ನನ್ನ ಪತಿಯೇ'

ಎಂದು ಹೇಳುತ್ತಿದ್ದರು. ಸೂರ್ ದಾಸ್, ತುಳಸಿ ದಾಸ್, ಕಬೀರ್ ದಾಸ್, ಮೀರಾ ಬಾಯಿ ಮುಂತಾದ ಸಂತರ ಪದ್ಯಗಳನ್ನು ಈಕೆ ಸುಶ್ರಾವ್ಯವಾಗಿ ಹಾಡಿದಾಗ ಕೇಳಿದವರು ಮೈಮರೆಯುತ್ತಿದ್ದರು. ತನ್ನ 13ನೇ ವಯಸ್ಸಿನಲ್ಲಿ ಮನೆಯಲ್ಲಿಯೇ ಧ್ಯಾನಾಭ್ಯಾಸ ಪ್ರಾರಂಭಿಸಿದ ಇವರು ಕಠಿಣ ತಪಸ್ಸಿನಿಂದ ಅನೇಕ ಅಲೌಕಿಕ ಮತ್ತು ಅದ್ಭುತ ಶಕ್ತಿಗಳನ್ನು ಗಳಿಸಿಕೊಂಡಿದ್ದಳು. ಈಕೆಯ ಮೇಲಿನ ಗೌರವಾರ್ಥವಾಗಿ ರಾಜ 'ಶಿವ್ ಸಿಂಗ್' ಡುಂಗರ ಪುರದಲ್ಲಿ ಶ್ರೀ ಕೃಷ್ಣ ಗಿರ್ಧರ್ ದೇವಾಲಯವನ್ನು ಇವರಿಗಾಗಿ ನಿರ್ಮಿಸಿದನು. ಇದನ್ನು 'ನಾಗರ ದೇವಾಲಯ' ಎಂದು ಸಹ ಕರೆಯಲಾಗುತ್ತಿದೆ. ಮುಂದೆ ಇಲ್ಲಿಯೇ ಗವರಿ ಬಾಯಿ ವಾಸಿಸುತ್ತಿದ್ದರಿಂದ ಅಲ್ಲಿಗೆ ಅನೇಕ ಸಂತರು ಭೇಟಿಗಾಗಿ ಬರುತ್ತಿದ್ದರು. ಒಮ್ಮೆ ಅಪರಿಚಿತ ಸಂತರೋಬ್ಬರ ಮಂತ್ರದೀಕ್ಷೆಯಿಂದ ಗವರಿಬಾಯಿ ಅಂತರ್ಮುಖಿಯಾಗಿ ಸಮಾಧಿ ಸ್ಥಿತಿಯಲ್ಲಿದ್ದಾಗ ಈಕೆಯನ್ನು ಪರೀಕ್ಷಿಸಲೆಂದು 'ಹರಿಯಬಾಯಿ' ಎಂಬಾಕೆ ಸೂಜಿಯಿಂದ ಚುಚ್ಚಿದ ಪರಿಣಾಮ ಹರಿಯಬಾಯಿ ಕುಷ್ಠರೋಗದಿಂದ ಬಳಲಬೇಕಾಯಿತಂತೆ. ಗವರಿಬಾಯಿಯವರ ಏಕೈಕ ಕೃತಿ 'ಕೀರ್ತನ ಮಾಲಾ' ದೇವನಾಗರಿಯಲ್ಲಿದ್ದರೂ; ಈಕೆಯ ನುಡಿಗಟ್ಟುಗಳಲ್ಲಿ ಸದುಕಡಿ ಭಾಷೆಯನ್ನು ಬಳಸಿದ್ದಾರೆ. ಇವರ ಪದ್ಯಗಳಲ್ಲಿ ರಾಜಸ್ತಾನಿ, ಗುಜರಾತಿ, ಖಡಿಬೋಲಿ ಮೊದಲಾದ ಭಾಷಾ ಮಿಶ್ರಣವನ್ನು ಕಾಣುತ್ತೇವೆ. ಗವರಿಬಾಯಿ ಅವರು ರಾಮ ಮತ್ತು ಕೃಷ್ಣರಿಬ್ಬರನ್ನು ಒಪ್ಪಿಕೊಂಡ ಪರಬ್ರಹ್ಮ ತತ್ವವನ್ನು ಸಮನಾಗಿ ಅಳವಡಿಸಿಕೊಂಡು ಅನುಸರಿಸಿದ್ದರಿಂದ ಈಕೆಯನ್ನು ಸಮನ್ವಯವಾದಿ ಸಂತ ಮಹಿಳಾ ಮಹಾಕವಿ ಎಂದು ಕರೆಯಬಹುದು.

**9. ಓಂಕಾರೇಶ್ವರಿ/ಲಲಿತಾಬಹನ್ 1989ರಲ್ಲಿ ನಿರ್ವಾಣ**

'ಭದೌಚ್' ಜಿಲ್ಲೆಯ ಸಿಸೋದರ ಗ್ರಾಮದ ಬ್ರಾಹ್ಮಣ ಮಂಗಲ್ ಬಾಯ್ ಅವರಿಗೆ ಜನಿಸಿದ ಈಕೆಯ ಮೂಲ ಹೆಸರು ಲಲಿತ ಬಹನ್. ಈಕೆ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯನಿಯಾಗಿದ್ದರು. ನಂತರ ಮೀರಾಬಾಯಿಯಂತೆ ವೈವಾಹಿಕ ಜೀವನದ ವೈಫಲ್ಯದಿಂದಾಗಿ ಮತ್ತು 1973ರಲ್ಲಿ ಸಾಗರ್ ಮಹಾರಾಜರ ಭೇಟಿಯಿಂದ ಅಲೌಕಿಕದೆಡೆಗೆ ಆಕರ್ಷಿತರಾಗಿ ಋಷಿಕೇಶಕ್ಕೆ ತೆರಳಿದರು. ಓಂಕರೇಶ್ವರಿಯವರು ತಮ್ಮ ಕೀರ್ತನೆಗಳಲ್ಲಿ ಸಖಿಯಾನ್, ಗರ್ಬಾ, ಕಕ್ಕ ಇತ್ಯಾದಿ ಸಂಯೋಜನೆಗಳು ಉತ್ತಮ ಗುಣಮಟ್ಟದವಾಗಿದ್ದವು. ಇವರ ಕೀರ್ತನೆಗಳಲ್ಲಿ ದೈವಿಕತೆ, ವಿನೋದ, ಆಂತರಿಕ ಸ್ವಾತಂತ್ರ್ಯ ಹಾಗೂ ಅಬ್ಬರದ ಭಕ್ತಿಯನ್ನು ಗುರುತಿಸಬಹುದು. ಈಕೆ ತಮ್ಮ ಬರಹಗಳಲ್ಲಿ ಸಂತ ಧೀರನಂತೆಯೇ ಯುದ್ಧದ ರೂಪಕಗಳನ್ನು ಬಳಸಿದ್ದಾರೆ. ಭಕ್ತಿಯ ಸಾಧನವಾಗಿ ಶಕ್ತಿಯಾಗಿ ತಾಳ್ಮೆಯ ಮುಕುಟವಾಗಿ ದುಃಖದ ರಕ್ಷಾ ಕವಚವನ್ನು ಧರಿಸಿದ ಗುರುವಾಗಿ ನಮ್ಮ ಅರಿಷಡ್ವರ್ಗಗಳನ್ನು ಧಮನ ಮಾಡುವ ಮೂಲಕ ಮೋಕ್ಷ ಪ್ರಾಪ್ತಿ ಸಾಧ್ಯವೆಂಬ ಓಂಕಾರೇಶ್ವರಿಯ ಉಪದೇಶಗಳು ಮನಮುಟ್ಟುವಂತಿದೆ. ಜೀವನ ನಶ್ವರವಾದ್ದರಿಂದ ಸಕಾರಾತ್ಮಕ ಆಲೋಚನೆಗಳ ಮೂಲಕ ನಾಮರಹಿತ ದೇವರ ಸ್ಮರಣೆ ಮತ್ತು ಗುರುವನ್ನು ಕೀರ್ತಿಸುವ ಚಿಂತನೆಗಳು ಇವಳ ರಚನೆಗಳಲ್ಲಿ ದೊರೆಯುತ್ತದೆ.

**10. ಅಂಬಾಬಾಯಿ 1828-1910**

ತಾತ ಗುರು ದರಿಯಾ ಸಾಹೇಬರು. ರಾಮಸ್ನೇಹಿ ಪಂಥದ ಸಂತ ಅಂಬಾಬಾಯಿ ಆ ಯುಗದ ಏಕೈಕ ಸೃಜನಶೀಲ ಕವಯಿತ್ರಿ. ಇವರ ಮೂರು ಮೇರು ಕೃತಿಗಳು; ಗುರು ಮಹಿಮೆ, ಕಾಕಬತ್ತಿಸಿ ಮತ್ತು ಶಿಷ್ಯ ಸಂಪ್ರದಾಯ. ಬ್ರಹ್ಮ ಸಾಕ್ಷಾತ್ಕಾರಕ್ಕೆ ಗುರು ಕರುಣೆಯೊಂದೇ ದಾರಿ ಎಂದಿದ್ದಾರೆ. ಇವರು ಸಹ ಸಹಜೋಬಾಯಿ ಮತ್ತು ದಯಾಬಾಯಿಯರಂತೆ ನಿರ್ಗುಣ ಕವಯಿತ್ರಿ ಆಗಿದ್ದರು. ಅಂಬಾಬಾಯಿಯವರ ಮಾತುಗಳೇ ಸಾಧುವಿನ ಕಂಠವನ್ನು ಕಂಗೊಳಿಸುತ್ತವೆ.

**11. ಸ್ವರೂಪ ಬಾಯಿ 1817ರಲ್ಲಿ ಭಿಲ್ವಾರದಲ್ಲಿ ಜನನ.**

ಮ್ಯಾಂಗ್ರೋಪ್ ಎಂಬ ಗ್ರಾಮಕ್ಕೆ ಈಕೆಯ ಇಚ್ಛೆಗೆ ವಿರುದ್ಧವಾಗಿ ಮದುವೆಯಾಗುತ್ತದೆ. ಅತ್ತೆಯಂದಿರು ದೈವ ಭಕ್ತಿಗೆ ಅಡ್ಡಿಪಡಿಸಿದರೆ, ಪತಿ 'ನಿತ್ಯ ಪುಸ್ತಕ' ಮತ್ತು 'ಗುರುವಾಣಿ'ಯನ್ನು ಬಾವಿಗೆ ಎಸೆದಾಗ ದೈವಭಕ್ತೆಯಾದ ಸ್ವರೂಪಬಾಯಿ ಅತ್ಯಂತ ದುಃಖಿತಳಾಗಿ ಕೌಟಂಬಿಕ ಜೀವನವನ್ನು ತ್ಯಜಿಸುತ್ತಾರೆ. ಮುಂದೆ ರಾಮಚರಂದಾಸ್ ಗುರುಜಿ ಅವರಲ್ಲಿ ಶಿಷ್ಯತ್ವ ಮತ್ತು ದೀಕ್ಷೆಯನ್ನು ಪಡೆದು ಶಹಪುರದಲ್ಲಿ ಭಕ್ತಿಯ ಅಭ್ಯಾಸ ಮಾಡುತ್ತಾರೆ. ಈಕೆಯ ಗ್ರಂಥಗಳು ಸಿಗದಿದ್ದರೂ ಶಹಪುರದ ರಾಮದ್ವಾರೆಯಲ್ಲಿ ಈಕೆಯ "ಹಸ್ತಲಿಖಿತ ವಾಣಿ"ಯನ್ನು

ಸುರಕ್ಷಿತವಾಗಿಡಲಾಗಿದ್ದು 'ಫುಲ್ ಡೋಲ್' ಎಂಬ ಉತ್ಸವದಲ್ಲಿ ಮಾತ್ರ ತೆರೆದು ಹಾಡಲಾಗುತ್ತದೆ. ಈಕೆಯದೊಂದು ಕವಿತೆ;

"ಸುಖದಾತ ಸದ್ಗುರೂಜಿ ಮೇರಾ ರಾಮಚರಣ್ ಅವತಾರಿ
ಹೋ ಜನ್ಮ ಸುಧಾರನ್ ಕಾಜು ಧರ ಚೌ ತನುಪಾರ್ ಕಿ
ನರ್ ನಾರಿ ಹೋ

ಅಧಂ ಜೀವಕೋ ಪಾವನ್ ಕರಿಯೋ ಸಬುಕಿ ದಯಾ ವಿಚಾರೋ ಹೋ...." ಎಂಬಲ್ಲಿ ಗುರುವಿನ ವಿಶೇಷ ಭಕ್ತಿ ಮತ್ತು ಲೌಕಿಕ ಭ್ರಮೆಗಳನ್ನು ತಿಳಿಸಿದ್ದಾರೆ. ಈಕೆಯ ವಿಮರ್ಶಾತ್ಮಕ ಪದ್ಯಗಳಲ್ಲಿ ಸುಲಭವಾದ ಮತ್ತು ಶಾಂತ ಭಕ್ತಿ, ತಮ್ಮ ಆಧ್ಯಾತ್ಮಿಕ ಜೀವನ ಮೊದಲಾದವುಗಳನ್ನು ರಾಜಸ್ಥಾನಿ ಭಾಷೆಯಲ್ಲಿನ ಛಂದಸ್ಸು, ಲಯ, ಅಲಂಕಾರ ರಹಿತ ಕವಿತೆಗಳಲ್ಲಿ ರಸದ ಹೊಳೆಯನ್ನು ಹರಿಸಿರುವ ಸ್ವರೂಪಬಾಯಿಯವರನ್ನು ಮೀರಾಬಾಯಿಗೆ ಹೋಲಿಸಬಹುದಾಗಿದೆ. ಒಟ್ಟಿನಲ್ಲಿ ಈಕೆ ಮಹಿಳಾ ಕವಿಗಳಲ್ಲಿ ಉನ್ನತ ಸ್ಥಾನ ಗಳಿಸಿದ್ದಾರೆ.

**12. ಸುಖೀದೇವಿ 19ನೇ ಶತಮಾನ.**

ವಿಮರ್ಶಾತ್ಮಕ ಪೋಸ್ಟ್‌ಗಳ ಲೇಖಕಿಯಾಗಿದ್ದ ಸುಖಿದೇವಿಯವರ 'ಭಜನಾ ಪುಷ್ಪಾವಳಿ' ಎಂಬ ತಮ್ಮ ಕಿರು ಪುಸ್ತಕದಲ್ಲಿ ನಿರ್ಗುಣ, ಸಗುಣ ಭಕ್ತಿಗೆ ಪೂರಕವಾದ ಪದ್ಯಗಳು ಲಭ್ಯವಿದೆ.

"ನಾಮ್ ಕಮಲ್ ಜಲಂಧರ್ ನಾರಿ ಸಾಂಸ್ ಧುಕಾನಿ ಧುಕ್ ರಾಹಿ" ಎಂಬಲ್ಲಿ ಹಠಯೋಗಿ ಅಭ್ಯಾಸದ ಸಮಗ್ರ ವಿವರಣೆ ಮತ್ತು ಲೌಕಿಕ ಸಂಬಂಧಗಳ ನಿರರ್ಥಕತೆಯನ್ನು ತಿಳಿಸಲಾಗಿದೆ. ಕಬೀರ್ ದಾಸರು ದೇಹಕ್ಕೆ 'ಹಾಳೆಯ' ರೂಪಕಗಳನ್ನು ನೀಡಿ ವರ್ಣಿಸಿದರೆ ಸುಖೀದೇವಿಯು ತನ್ನ ದೇಹಕ್ಕೆ ಸುರಂಗದ ರೂಪಕವನ್ನು ನೀಡಿ ವರ್ಣಿಸಿದ್ದಾಳೆ.

**13. ಬಹಿನಾ ಬಾಯಿ 1550-1622, ಸ್ಥಳ:ಮಹಾರಾಷ್ಟ್ರ. ತುಕಾರಾಮನ ಶಿಷ್ಯೆ.**

ದೇವಗಾಂ ಪಟ್ಟಣದ ಆವುಜಿ ಕುಲಕರ್ಣಿ ಮತ್ತು ಜಾನಕಿ ಬಾಯಿಯ ಮಗಳು. ನಾಲ್ಕು ವರ್ಷದ ಈಕೆಯನ್ನು ಶಿವಪುರದ 30 ವರ್ಷದ ಗಂಗಾಧರ ಪಾಠಕ್ ಎಂಬುವವನಿಗೆ ವಿವಾಹ ಮಾಡಿದ ತಂದೆ ಮುಂದೆ ಕುಟುಂಬ ಸಮೇತ ಪಂಡರಾಪುರಕ್ಕೋಗಿ ನೆಲೆಸಿದರು. ಈಕೆಯ ತೀವ್ರ ಅಭಿಲಾಷೆಯ ಮೇರೆಗೆ ಸಂತ ತುಕಾರಾಮನು ಈಕೆಯ ಕನಸಿನಲ್ಲಿ ಬಂದು 'ರಾಮ-ಕೃಷ್ಣ-ಹರಿ' ಎಂಬ ಮಂತ್ರವಿತ್ತು ಮಾರ್ಗದರ್ಶನ ಮಾಡುತ್ತಿದ್ದರು. ಮೌನವ್ರತೆಯಾಗಿದ್ದ ಈಕೆಯು ಶಿವಾಜಿಗೆ ಧರ್ಮ ಗುರುವಾಗಿದ್ದೂ ತನ್ನ 72ನೇ ವಯಸ್ಸಿನಲ್ಲಿ ಇಹಲೋಕ ತ್ಯಜಿಸಿದಳು. ಬಹಿನಾ ಬಾಯಿಯ ಅಭಂಗ ಸಂಯೋಜನೆಗಳಲ್ಲಿ ವೈವಾಹಿಕ ಜೀವನದ ವಿಷಾದವನ್ನು ಕೇಂದ್ರೀಕರಿಸಿದವಾಗಿವೆ. 'ಪತಿಭಕ್ತಿ' ಹಾಗೂ 'ವಿಠ್ಠಲನ ಭಕ್ತಿ'ಗೆ ಸಮಾನ ಸಮಯವನ್ನು ಹೊಂದಾಣಿಕೆ ಮಾಡಿಕೊಂಡಿರುವುದು ಕಂಡುಬರುತ್ತದೆ. ಇವರ ಕೃತಿಗಳಲ್ಲಿ ಅದ್ವೈತವಾದವನ್ನು ಮತ್ತು ಸಗುಣೋಪಾಸನೆ ಜೊತೆಗೆ ನಿರ್ಗುಣೋಪಾಸನೆಯ ತತ್ವಗಳನ್ನು ಕಾಣಬಹುದು. ಈಕೆಯ ಕೆಲವು ಕಾವ್ಯಗಳಲ್ಲಿ ಶರೀರ ಸೌಂದರ್ಯದ ಮೋಹಕ್ಕೆ ಬಲಿಯಾಗದೆ ಭಗವಂತನಲ್ಲಿ ತಲ್ಲೀನತೆಯನ್ನು ಹೊಂದಬೇಕೆಂಬ ಆಶಯವನ್ನು ಹಾಗೂ ಎರಡು ದಿನಗಳ ಈ ಜೀವನವನ್ನು ಈಶ್ವರನಿಗೆ ಸಮರ್ಪಿಸಬೇಕೆಂದು ತಿಳಿಸುವ ಪದ್ಯಗಳನ್ನು ಕಾಣಬಹುದು. ಉದಾಹರಣೆಗೆ

"ದೋ ದಿನ್ ಕಿ ಯಹ್ ದುನಿಯಾ ರೆ ಬಾಬ, ದೋ ದಿನ್ ಕಿ ಹೈ ದುನಿಯಾ.

ಲೇ ಅಲ್ಲಾ ಕಾ ನಾಮ್ ಕುಚ್ ಧರೋ ಧ್ಯಾನ್ ಬಂದೆ ನಾ ಹೋನಾ ಗುಂಗಾ. ಎಂದು ತಿಳಿಸಿರುವ ಈಕೆಯ ಜೀವನ ಚರಿತ್ರೆ ಕಾವ್ಯಮಯವಾಗಿದೆ. ಈಕೆಯ ಅತ್ಯುತ್ತಮವಾದ ಪ್ರಸಾದಿಕ ಶೈಲಿಯೂ,' ಜೀವನ ಮತ್ತು ಧರ್ಮದರ್ಶನಗಳನ್ನು ಕಾಣಿಸುವಂತಿದೆ.

**ವಿಷಯದ ಫಲಿತಗಳು**

ಒಟ್ಟಾರೆ ಹಿಂದಿ ಮೂಲದ ಈ ಸಂತ ಮಹಿಳೆಯರ ವ್ಯಕ್ತಿತ್ವ ಮತ್ತು ಸಾಹಿತ್ಯ ದರ್ಶನವನ್ನು ಅಧ್ಯಯನ ಮಾಡಿದಾಗ ತಿಳಿದುಬರುವ ಪ್ರಮುಖ ಅಂಶಗಳೆಂದರೆ ಲಲ್ಲೇಶ್ವರಿ, ಓಂಕಾರೇಶ್ವರಿ, ಸ್ವರೂಪ ಬಾಯಿ ಮೊದಲಾದವರೆಲ್ಲರೂ ಸಾಂಸಾರಿಕ ಜೀವನದಲ್ಲಿನ ಕಿರುಕುಳದಿಂದ ಆಧ್ಯಾತ್ಮಿಕ ವೈರಾಗ್ಯ ಇವರಿಗೆ ಉಂಟಾಯಿತಾ ಎಂದೆನಿಸುತ್ತದೆ. ಹಾಗೆಯೇ

ಗವರಿ ಬಾಯಿ ಮತ್ತು ಬಹಿನಾ ಬಾಯಿ ಸೇರಿದಂತೆ ಎಲ್ಲರೂ ಬಾಲ್ಯ ವಿವಾಹಕ್ಕೆ ಬಲಿಪಶುಳಾಗಿದ್ದರು ಎಂಬುದು ತಿಳಿದು ಬರುತ್ತದೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಈಗಿನ ಕಾಲದಲ್ಲಿನ ಮಹಿಳೆಯರು ಶೈಕ್ಷಣಿಕವಾಗಿ ಆರ್ಥಿಕವಾಗಿ ಔದ್ಯೋಗಿಕವಾಗಿ ಬೌದ್ಧಿಕವಾಗಿ ಇತ್ಯಾದಿಯಾಗಿ ಒಂದುವರೆದಿದ್ದರೂ ತನ್ನಿಷ್ಟದಂತೆ ಸಹಜವಾಗಿ ಬದುಕುವುದು ದುಸಾಧ್ಯವಾಗಿರುವಾಗ ಆ ಕಾಲಮಾನದಲ್ಲಿನ ಮಹಿಳೆಯರ ಪರಿಸ್ಥಿತಿ ಹೇಗಿರಬಹುದು ಎಂಬುದನ್ನು ಬಿಡಿಸಿ ಹೇಳುವ ಅವಶ್ಯಕತೆ ಇಲ್ಲ ಹಾಗಾಗಿ ಈ ಸಂತ ಮಹಿಳೆಯರೆಲ್ಲ ಒಂದಲ್ಲ ಒಂದು ರೀತಿಯಿಂದ ಶೋಷಣೆಗೆ ಒಳಗಾಗಿಯೇ ಅಲೌಕಿಕ ಆಧ್ಯಾತ್ಮಿಕ ಒಲವಿಗೆ ಒಳಗಾದರಾ? ಎಂಬ ಪ್ರಶ್ನೆಯೂ ಮೂಡುತ್ತದೆ.

ಹಾಗೆಯೇ ಅಕ್ಬರ್, ಮೊಘಲ್ ರಾಜ 'ಶಾ ಆಲಂ', 'ಮಹಾರಾಜ ಜಸ್ವನ್ ಸಿಂಗ್' ಸೇರಿದಂತೆ ಮಹಾನ್ ಸಾಧು-ಸಂತರಾದ ಶ್ರೀ ಚಕ್ರಧರ ಸ್ವಾಮಿಗಳು, ಸಂತ ತುಕಾರಾಂ, ರಾಮ್ ಚರಣ್ ದಾಸ್ ಜಿ ಮುಂತಾದವರ ಪೂರಕ ಮಾಹಿತಿಗಳು ಬರುವುದರಿಂದ ಹಲವು ಚಾರಿತ್ರಿಕ ಮತ್ತು ಐತಿಹಾಸಿಕ ಅಂಶಗಳು ತಿಳಿದು ಬರುತ್ತದೆ.

## ಉಪಸಂಹಾರ

ಮಧ್ಯಕಾಲೀನ ಯುಗದಲ್ಲಿ ಭಾರತವು ಸಾಕಷ್ಟು ಆಂತರಿಕ ಮತ್ತು ಪರಕೀಯ ಯುದ್ಧಗಳಿಂದ ಕಂಗಾಲಾಗಿದ್ದ ಸಂದರ್ಭದಲ್ಲಿ ಶಾಂತಿ, ಸಮಾನತೆ, ಆತ್ಮ ಸಾಕ್ಷಾತ್ಕಾರಗಳನ್ನೊಳಗೊಂಡ ಭಕ್ತಿ ಚಳುವಳಿಯು ಭಾರತದ ಉದ್ದಗಲಕ್ಕೂ ವ್ಯಾಪಿಸಿತ್ತು. ಅನೇಕ ಸಾಧು-ಸಂತರು, ನಿರ್ಗುಣವಾದಿಗಳು, ಸಗುಣವಾದಿಗಳು ಮತ್ತು ಮಹಾತ್ಮರು ವಚನ, ಭಜನೆ, ಕೀರ್ತನೆಗಳ ಭಕ್ತಿ ಆಂದೋಲನಗಳಲ್ಲಿ ಸ್ತ್ರೀಯರನ್ನು ಸಂಘಟಿಸಿಕೊಂಡು ಸಾಮಾಜಿಕ ಕ್ರಾಂತಿಗೆ ಕಾರಣೀಭೂತರಾದರು. ಈ ಕೃತಿಯಲ್ಲಿನ ಎಲ್ಲ ಸ್ವಂತ ಮಹಿಳೆಯರು ಕೌಟುಂಬಿಕ, ಸಾಮಾಜಿಕ, ಧಾರ್ಮಿಕ ಸುಧಾರಣೆಗಳ ಮೆಟ್ಟಲನ್ನೇರಿ ಸಮ ಸಮಾಜಕ್ಕೆ ನೈತಿಕ ದಾರಿಯನ್ನು ತಿಳಿಸಿಸುವ ಮೂಲಕ ಅನುಕರಣೀಯರಾಗಿದ್ದಾರೆ. ಪ್ರಸ್ತುತ ಇವರ್ಯಾರು ದೈಹಿಕವಾಗಿಲ್ಲದಿದ್ದರೂ, ಇವರುಗಳು ಬಿತ್ತಿಹೋಗಿರುವ ಚೈತನ್ಯಶಕ್ತಿ ಸದಾ ಜೀವಂತವಾಗಿದೆ. ಈ ಪುಸ್ತಕವನ್ನು ಓದಿದ ಮೇಲೆ ನೂರರಲ್ಲಿ ಒಂದಂಶವಾದರು ನಮ್ಮ ಮನಸ್ಸು ಪರಾತ್ಪರ ಚಿಂತನೆಯೆಡೆಗೆ ವಾಲುವುದರಲ್ಲಿ ಸಂದೇಹವಿಲ್ಲ.

**ಗ್ರಂಥ ಋಣ / ಆಕರ:** ಮಧ್ಯಕಾಲೀನ ಭಾರತದಲ್ಲಿ ಸಂತ ಮಹಿಳೆಯರ ವ್ಯಕ್ತಿತ್ವ ಮತ್ತು ಸಾಹಿತ್ಯ ದರ್ಶನ, ಲೇಖಕರು ಡಾ.ಚಿ.ದೇ.ಸೌಮ್ಯ. ದೇವನಾಗ ಪ್ರಕಾಶನ, ಪ್ರಥಮ ಮುದ್ರಣ 2024.

## ಗ್ರಂಥ ಋಣ/ಆಕರ


1. ಮಧ್ಯಕಾಲೀನ ಭಾರತದಲ್ಲಿ ಸಂತ ಮಹಿಳೆಯರ ವ್ಯಕ್ತಿತ್ವ ಮತ್ತು ಸಾಹಿತ್ಯ ದರ್ಶನ, ಲೇಖಕರು ಡಾ.ಚಿ.ದೇ.ಸೌಮ್ಯ. ದೇವನಾಗ ಪ್ರಕಾಶನ, ಪ್ರಥಮ ಮುದ್ರಣ 2024.
2. https://g.co/kgs/YnAkEca, ಭಕ್ತಿ ಚಳುವಳಿಯ ಮಹಿಳೆಯರು
3. https://g.co/kgs/yC13awc, ಮಹಾರಾಷ್ಟ್ರದ ಮಹಿಳಾ ಸಂತರು ಮತ್ತು ಸಮಾಜ ಮತ್ತು ಹಿಂದೂ ಚಿಂತನೆಯ ಮೇಲೆ ಅವರ ಪ್ರಭಾವ (ಅಂದು ಮತ್ತು ಈಗ)
4. https://youtu.be/XkLjuHvyaSU?si=b4j1LL7BPtZsXkpl ಲಲ್ಲೇಶ್ವರಿ I ಬೋಧಿ ವೃಕ್ಷ I ಸ್ವರಾಜ್ಯಕ್ಕೆ ಮುಕ್ಕಾಲ್ಲೂರು
5. https://youtu.be/Stft3kaTz2c?si=MqN1GPoDRKzos4OXLalded Ke lal-vakh: Lalleshwari of Kashmir : Sunayana Kachroo in Hindi Studio with Manish Gupta